# ಸೆಲೆಬ್ರಿಟಿ

■ ಹನಿ

## ಜಾಣೆ ಜಾಕ್ಸನ್

ಬಾಲಿವುಡ್‌ನಲ್ಲಿ ನಟಿಯರ ಪ್ರೇಮಭಂಗ ಮತ್ತು ಆತ್ಮಹತ್ಯೆಗಳ ಚರ್ಚೆ ದೊಡ್ಡದಾಗಿ ನಡೆಯುತ್ತಿದೆ. ಜಿಯಾ ಖಾನ್ ಆತ್ಮಹತ್ಯೆ ಮಾಡಿಕೊಂಡದ್ದರಿಂದ ಉಂಟಾದ ವಿಷಾದದ ಛಾಯೆ ಇನ್ನೂ ಕಡಿಮೆಯಾಗಿಲ್ಲ. ಆದರೆ ಪ್ರೇಮಭಂಗಕ್ಕೆ ಒಳಗಾದ ಎಲ್ಲ ನಟಿಯರೂ ಜಿಯಾಳಂತೆ ಸಾಯವುದಿಲ್ಲ ಎನ್ನುವುದಕ್ಕೆ ತಾಜಾ ಉದಾಹರಣೆ ಅಮಿ ಜಾಕ್ಸನ್. ಹಿಂದಿ, ತಮಿಳು, ತೆಲುಗು ಚಿತ್ರರಂಗದಲ್ಲಿ ಕೈತುಂಬ ನಟನೆಯ ಅವಕಾಶಗಳನ್ನು ಪಡೆಯುತ್ತಿರುವ ಅಮಿ ಜಾಕ್ಸನ್, ಪ್ರೇಮ ವೈಫಲ್ಯವನ್ನು ಮೆಟ್ಟಿ ನಿಂತು ಗೆಲುವು ಸಾಧಿಸುತ್ತಿರುವವಳು.

ಈ ಬ್ರಿಟನ್ನಿನ ಬಾಲೆ ಸದ್ಯಕ್ಕೆ ಬಾಲಿವುಡ್ ಮತ್ತು ದಕ್ಷಿಣದ ಚಿತ್ರರಂಗದಲ್ಲಿ ಭಾರೀ ಬ್ಯುಸಿ. ತಂದೆ ಬಿಬಿಸಿ ರೇಡಿಯೋದಲ್ಲಿ ನಿರ್ಮಾಪಕನಾಗಿದ್ದುದರಿಂದಲೋ ಏನೋ ಈಕೆಗೆ ಬಾಲ್ಯದಲ್ಲೇ ಮಾಡೆಲಿಂಗ್ ಲೋಕದ ಸಂಪರ್ಕ ಸಿಕ್ಕಿತು. ಮಿಸ್ ಟೀನ್ ಲಿವರ್‌ಪೂಲ್, ಮಿಸ್ ಟೀನ್ ಗ್ರೇಟ್ ಬ್ರಿಟನ್ ಪ್ರಶಸ್ತಿಗಳನ್ನು 16ರ



ಹರೆಯದಲ್ಲೇ ಮುಡಿಗೇರಿಸಿಕೊಂಡು 2009ರಲ್ಲಿ ಮಿಸ್ ಟೀನ್ ವರ್ಲ್ಡ್ ಗೆದ್ದಳು. ತಮಿಳಿನಲ್ಲಿ 'ಮದ್ರಾಸ ಪಟ್ಟಣಂ' ಎಂಬ ಪೀರಿಯಡ್ ಸಿನಿಮಾದಲ್ಲಿ ಬ್ರಿಟಿಶ್ ಗವರ್ನರ್ ಮಗಳ ಪಾತ್ರಕ್ಕೆ ಸ್ಕ್ರೀನ್‌ಟೆಸ್ಟಿಂಗಿಗೆ ಬಂದ ಅಮಿ, ಆ ಬಳಿಕ ಮುಂಬೈಯಲ್ಲೇ ನೆಲೆಸಿದಳು. ಆ ಚಿತ್ರದ ಮನೋಜ್ಞ ನಟನೆಯಿಂದಾಗಿ ನಿರ್ಮಾಪಕರು ಮುಗಿಬಿದ್ದರು. ಹಿಂದಿಯ 'ಏಕ್ ದೀವಾನಾ ಥಾ' ತೆಲುಗಿನ 'ಎವುಡು' ಈಕೆಯ ಬೇಡಿಕೆಯನ್ನು ಇನ್ನಷ್ಟು ಹೆಚ್ಚಿಸಿದೆ. ತಮಿಳಿನ ಪ್ರಖ್ಯಾತ ನಿರ್ದೇಶಕ ಶಂಕರ್ ಅವರ 'ಐ' ಚಿತ್ರಕ್ಕೂ ಈಗ ಈಕೆ ನಾಯಕಿ.

ಬಾಲಿವುಡ್‌ನಲ್ಲಿ ನಟ ಪ್ರತೀಕ್ ಬಬ್ಬರ್‌ನ ಪ್ರೇಮಪಾಶಕ್ಕೆ ಬಿದ್ದಿದ್ದ ಈಕೆ ಆತನ ಜತೆಗೆ ಲಿವಿಂಗ್ ಟುಗೆದರ್ ನಡೆಸಿದ್ದಳು. ಆದರೆ 2 ವರ್ಷಗಳ ಬಳಿ ಪ್ರತೀಕ್ ಈಕೆಯನ್ನು ತಿರಸ್ಕರಿಸಿದ. ಎದೆಗುಂದದ ಅಮಿ ಈಗ ಬ್ರಿಟನ್ನಿನ ಇನ್ನೊಬ್ಬ ಉದ್ಯಮಿ ಗೆಳೆಯನ ಪ್ರೀತಿ ಗೆದ್ದಿದ್ದಾಳಂತೆ. ಅಂದ ಹಾಗೆ ಈಕೆ ತನ್ನ ತೋಳಿನಲ್ಲಿ ಹಚ್ಚೆ ಹಾಕಿಸಿಕೊಂಡಿದ್ದ ಪ್ರತೀಕ್‌ನ ಹೆಸರನ್ನು ಅಳಿಸಲು, ಲಂಡನ್ನಿಗೆ ಪ್ಲಾಸ್ಟಿಕ್ ಸರ್ಜರಿಗೆ ಪ್ರವಾಸ ಹೊರಟಿದ್ದಾಳೆಂದೂ ಸುದ್ದಿ!



## ರಫಾ 'ದಿ ಗ್ರೇಟ್'

ರಫೆಲ್ ನಡಾಲ್ 27ರ ಹರೆಯದಲ್ಲಿ ಎಂಟನೇ ಬಾರಿ ಫ್ರೆಂಚ್ ಓಪನ್ ಕಿರೀಟವನ್ನು ಕೈಗೆತ್ತಿಕೊಂಡಿದ್ದಾರೆ. 2005ರಿಂದ ಈ ಫ್ರೆಂಚ್ ಗ್ರ್ಯಾನ್‌ಪ್ರಿಗೂ ನಡಾಲ್‌ಗೂ ಅಂಟಿದ ನಂಟು ಬಿಟ್ಟಿಲ್ಲ. ನಡುವೆ 2009ರಲ್ಲಿ ಒಮ್ಮೆ ಬಿಟ್ಟರೆ ಉಳಿದ ಅಷ್ಟೂ ವರ್ಷಗಳಲ್ಲಿ ಫ್ರೆಂಚ್ ಟೆನಿಸ್‌ಗೆ ರಫಾನೇ ರಾಜ. ಈತನನ್ನು ವಿಶ್ಲೇಷಕರು 'ಕಿಂಗ್ ಆಫ್ ಕ್ಲೇ ಕೋರ್ಟ್' ಎಂದು ಕರೆಯುವುದಕ್ಕೂ ಆವೆಮಣ್ಣಿನ ಪ್ಯಾರಿಸ್ ಕೋರ್ಟ್‌ನಲ್ಲಿ ಈತ ಗೆಲ್ಲುವುದಕ್ಕೂ ಸರಿಹೋಗುತ್ತಿದೆ. ಕ್ಲೇ ಕೋರ್ಟ್‌ನಲ್ಲಿ ಈತ ಈವರೆಗೆ ಆಡಿರುವ 82 ಪಂದ್ಯಗಳಲ್ಲಿ ಒಮ್ಮೆ ಮಾತ್ರ ಫೆಡರರ್ ವಿರುದ್ಧ ಸೋತಿದ್ದಾನೆ! ಹಾಗೆಂದು ಹಸಿರು ಹುಲ್ಲು ಅಂಕಣ ಮತ್ತು ಹಾರ್ಡ್ ಕೋರ್ಟ್‌ನಲ್ಲಿಯೂ ಈತ ಗೆಲ್ಲುವುದಿಲ್ಲ ಎಂದಲ್ಲ; ಈಗಾಗಲೆ ಅಲ್ಲೂ ತಲಾ ಎರಡು ಗ್ರ್ಯಾನ್‌ಸ್ಲಾಮ್ ಗೆದ್ದಿದ್ದಾನೆ. ಈ ವರ್ಷ ಎಲ್ಲ ಮೂರು ರೀತಿಯ ಅಂಕಣಗಳಲ್ಲೂ ಗ್ರ್ಯಾನ್‌ಸ್ಲಾಮ್ ಗೆದ್ದಿರುವ ಏಕೈಕ ಆಟಗಾರ ಈ ರಫಾ. ಈ ಹಿಂದೆ ಇಂತಹ ಸಾಧನೆಯನ್ನು ಮಾಡಿದ್ದು ಮ್ಯಾಟ್ಸ್ ವಿಲಾಂಡರ್ ಮಾತ್ರ! ಸತತ ಒಂಭತ್ತು ವರ್ಷಗಳ ಕಾಲ ಒಂದಲ್ಲ ಒಂದು ಗ್ರ್ಯಾನ್‌ಸ್ಲಾಂ ಗೆದ್ದಿರುವ ವಿಶ್ವದ ಏಕೈಕ ಆಟಗಾರನೂ ಈ ನಡಾಲ್!

ನಡಾಲ್ ಆಟದ ಕುತೂಹಲಕರ ಸಂಗತಿಯೆಂದರೆ ಈತ ಬೇಸ್‌ಲೈನ್ ಆಟಗಾರ. ನೆಟ್‌ನಿಂದ ಸಾಕಷ್ಟು ಹಿಂದಕ್ಕೆ ನಿಂತು ರಕ್ಷಣಾತ್ಮಕ ಆಟವಾಡುವುದು ಈತನ ಶೈಲಿ. ವೇಗದ ಸರ್ವಿಸ್‌ಗಿಂತ ಟಾಪ್‌ಸ್ಪಿನ್ ಗ್ರೌಂಡ್‌ಸ್ಟ್ರೋಕ್‌ಗಳಲ್ಲೇ ಹೆಚ್ಚು ಅಂಕ ಗಳಿಸುವಾತ. ಕೋರ್ಟ್‌ನಲ್ಲಿ ವೇಗವಾಗಿ ಓಡಾಡುವುದು ನಡಾಲ್ ವಿಶೇಷತೆ. ಈತನ ಕಾಲುಗಳ ಅತಿವೇಗದ ಚಲನೆ ಕಂಡೇ ನೈಕ್ ಕಂಪೆನಿ ಸದಾ ಕಾಲ ಈತನ ಶೂಗಳನ್ನು ಮತ್ತು ಬಟ್ಟೆಗಳನ್ನು ಸ್ಪಾನ್ಸರ್ ಮಾಡುತ್ತಿರಬೇಕು!

ನಡಾಲ್ ಜಾಹೀರಾತುದಾರರ ಅಚ್ಚುಮೆಚ್ಚು. ಕಿಯಾ ಮೋಟರ್ಸ್‌ನ ಜಾಗತಿಕ ರಾಯಭಾರಿ. ಯೂನಿವರ್ಸಲ್ ಡಿವಿಡಿ, ನೈಕ್ ಮತ್ತಿತರ ಕಂಪೆನಿಗಳ ಜತೆ ಒಪ್ಪಂದವಿದೆ. ಸ್ಲೀವ್‌ಲೆಸ್ ಶರ್ಟ್, ಮುಕ್ಕಾಲು ಪ್ಯಾಂಟಿನ ಈ ಟೆನಿಸಿಗನ ಉದ್ದ ತಲೆಕೂದಲು ಅಭಿಮಾನಿಗಳಿಗೂ ಅಚ್ಚುಮೆಚ್ಚು. ಅದಕ್ಕೆಂದೇ ಶಕೀರಾ ತನ್ನ ಜಿಪ್ಸಿ ಎನ್ನುವ ವೀಡಿಯೊ ಆಲ್ಬಂನಲ್ಲಿ ಈತನಿಗೊಂದು ಪಾತ್ರ ಕೊಟ್ಟಿದ್ದು. ಆಕೆಯ 'ಶಿ ವೂಲ್ಫ್' ಆಲ್ಬಂನಲ್ಲೂ ನಡಾಲ್ ಇದ್ದಾನೆ. ಎಲ್ಲಕ್ಕಿಂತ ಹೆಚ್ಚಾಗಿ ಫುಟ್‌ಬಾಲ್ ಕ್ರೇಜ್ ಹೊಂದಿರುವ ನಡಾಲ್ 'ರಿಯಲ್ ಮ್ಯಾಡ್ರಿಡ್' ಕ್ಲಬ್‌ನ ಕಟ್ಟಾ ಅನುಯಾಯಿ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65